ಕುಣಿದು ಕತೆ ಶುರುವಾಗುವ ಮೊದಲೇ ಅಕ್ಕು ಪೂಜಾರ್ತಿಯ ತಲೆ ಅಂತಕ್ಕನ ಹೆಗಲ ಮೇಲಿರುತ್ತಿತ್ತು. "ಓ... ಎಂತ ಸಾವಿನ ನಿದ್ದೆಯೇ ನಿನ್ನದು... ಕಣ್ಣುಬಿಡೆ" ಗೋಣಗಿಕೊಂಡೇ ತಟ್ಟಿ ಎಬ್ಬಿಸುತ್ತಿದ್ದರು. ಆಟ ಕಳೆದು ಮಾರನೇ ದಿನ ಇಡೀ ಆಟದ್ದೆ ಚರ್ಚೆ! ಒಮ್ಮೆ ಕೃಷ್ಣ ಸಂಧಾನ ಆಟ ನೋಡಿದ್ದರಲ್ಲಿ ಕೃಷ್ಣನ ಪಾತ್ರಧಾರಿಯ ಚಂದ, ಕುಣಿತ ಅಕ್ಕುವಿಗೆ ಭಾರೀ ಹಿಡಿಸಿತ್ತು. ಆದರೆ, ಕರ್ಣನ ವೇಷಧಾರಿ ಕೃಷ್ಣನನ್ನು ಮಾತಿನಲ್ಲಿ ಕಟ್ಟಿ ಹಾಕಿದ್ದು ಅಷ್ಟೇನೂ ಖುಷಿ ಕೊಟ್ಟಿರಲಿಲ್ಲ. ಅಂತಲೇ ಮಾರನೇ ದಿನ ಚರ್ಚೆ ನಡೀವಾಗ, "ಎಂತ ನಿಮ್ಮ ಸುಂದರಣ್ಣನ ಕರ್ಣ? ಕೃಷ್ಣ ದೇವರಿಗೇ ಎದುರು ಮಾತನಾಡುವುದ? ದೇವರು ಅಂದರೆ ಚೂರಾದ್ರೂ ಭಯ ಬೇಡವಾ?" ಅಂತ ಅಂತಕ್ಕನನ್ನು ಕೆಣಕಿದ್ದಳು. "ನಿಂಗೇನು ಗೊತ್ತೇ? ನರಮನುಷ್ಯ ನೇರ್ಪದ ಬಾಳು ಬಾಳಿದ ಎಂದರೆ ಅವನು ದೇವರಿಗೂ ಸಾ ಹೆದರುವುದು ಬೇಡ. ದೇವರೇ ಅವನಿಗೆ ಸೋಲ್ತಾನೆ ಅಂತ ನೋಡುವವರಿಗೆ ತೋರಿಸಿದ್ದು ಕರ್ಣ. ಕರ್ಣ ಎಂದರೆ ಕುಂಬ್ಳೆ ಸುಂದರಣ್ಣನ ಕರ್ಣ" ಎಂದು ಬಾಯಿ ಮುಚ್ಚಿಸಿದ್ದಳು ಅಂತಕ್ಕ. ಭಕ್ತ ಕುಂಬಾರ ಸಿನಿಮಾ ಕಾಸರಗೋಡಿಗೆ ಬಂದಾಗಲೂ ಅಕ್ಕುವನ್ನು ಎಳೆದುಕೊಂಡು ಹೋದದ್ದು ಅಂತಕ್ಕನೆ. ಆ ಸಿನಿಮಾ ನೋಡಿ ಇಬ್ಬರೂ ಅತ್ತದ್ದು ಎಷ್ಟೆಂದರೆ ಮರಳಿ ಬರುವಾಗ ಗೋಪಾಲಣ್ಣ ಜೀಪು ಓಡಿಸುತ್ತಿದ್ದ ಇಸಬು ಬ್ಯಾರಿಯಲ್ಲಿ, "ಇಕ್ಕಳ್ಳ ಇಸಬು ...ಜೀಪಿನಲ್ಲಿ ಒಂದು ಹಂಡೆ ಇಟ್ಟಿದ್ದರೆ ತುಂಬಿಸಿ ತರಬಹುದಿತ್ತು ಮಾರಾಯ" ಎಂದು ಮಸ್ಕಿರಿ ಮಾಡುವಷ್ಟು!

ಅಂತರಂಗದ ಮಾತುಗಳನ್ನು ಹಂಚಿಕೊಳ್ಳುವುದರಲ್ಲೂ ಅಷ್ಟೇ. ಬೊಂಬಾಯಿಗೆ ಹೋದ ಯಜಮಾನರು ಎಲ್ಲಿ ಸುತ್ತುತ್ತಾ ಇದ್ದಾರೋ? ಯಾವ ರಂಭೆ ಸೆರಗು ಹಾಸಿದ್ದಾಳೋ? ಎಂಬ ಭಯವನ್ನು ತೋಡಿಕೊಳ್ಳುವುದೂ ಅಕ್ಕುವಿನಲ್ಲೇ. ಆಗೆಲ್ಲಾ ಅಕ್ಕು, "ನೀವು ಸುಮ್ಮನೆ ಸಂಶಯ ಮಾಡುವುದು? ಗೋಪಾಲಣ್ಣ ಹಾಗೆ ಎಂತ ಹೋಗಲಿಕ್ಕಿಲ್ಲ" ಎಂದು ಸಮಾಧಾನ ಹೇಳುವವಳು. "ಸಂಶಯ ಅಂತ ಅಲ್ಲವೇ. ಹೆಣ್ಣು ತಾನಾಗಿ ಸೆರಗು ಜಾರಿಸಿದರೆ ಜಾರಿ ಬೀಳದ ಗಂಡು ಇದ್ದಾನಾ? ಇಲ್ಲೇ ನಮ್ಮ ಬೈಲಿನಲ್ಲೇ ಅಂತಹವುಗಳು ಬೇಕಷ್ಟು ಇದ್ದಾವೆ. ಏನೋ ನನ್ನ ಕಣ್ಣಿಗೆ ಬಿದ್ದೀತೆಂಬ ಭಯದಲ್ಲಿ ಜಾಗ್ರತೆ ಮಾಡ್ತಾರೆ. ಅಲ್ಲಿ ದೂರದ ಊರಿನಲ್ಲಿ ಕಣ್ಣೆ ಬಿಚ್ಚಿ ಬಿಟ್ಟ ಕೋಣದ ಕತೆಯಾದೀತು." ನಿಟ್ಟುಸಿರಿಡುತ್ತಿದ್ದಳು ಅಂತಕ್ಕ. ಅಂತಹ ಒಂದು ಸಮಯದಲ್ಲೇ ಅಂತಕ್ಕ ಏಕಾಏಕಿ ಕೇಳಿದ್ದಳು, "ಅಲ್ಲವೇ ಅಕ್ಕು ನೀನೂ ಸ್ವಲ್ಪ ಸಮಯ ಆ ಸುಖ ಉಂಡವಳು. ನಿಂಗೆ ಮತ್ತೆ ಯಾವತ್ತೂ ಅದು ಬೇಕು ಅಂತ ಅನ್ನಿಸಲಿಲ್ಲವೇ? ನಿನ್ನದೂ ಉಪ್ಪು ಖಾರ ತಿನ್ನುವ ಜೀವ?" ಅಂತಕ್ಕನ ಕುತೂಹಲದ ಮಾತನ್ನು, "ಉಪ್ಪು ಖಾರ ತಿನ್ನುವ ವಿಷಯದಲ್ಲಿ ನಾನು ನಿಮಗಿಂತ ಚೂರು ಬಿರ್ಸೆದಿಯೇ. ಇವತ್ತು ಮಧ್ಯಾಹ್ನ ಊಟಕ್ಕೆ ಗಾಂಧಾರಿ ಮೆಣಸು ತಿಂದದ್ದಕ್ಕೆ ಬಯ್ದವರು ನೀವಲ್ಲವೇ" ಅಕ್ಕು ತಮಾಷೆಯಲ್ಲಿ ತೇಲಿಸಲು ನೋಡಿದರೂ ಅಂತಕ್ಕ ಬಿಡುತ್ತಿರಲಿಲ್ಲ. "ನಿಜ ಹೇಳೇ... ನಿಂಗೆ ಯಾವತ್ತೂ ಬೇಕು ಅನ್ನಿಸಲಿಲ್ಲವೇ?" ಅಕ್ಕು ನಗುತ್ತಿದ್ದಳು. "ಬೇಕು ಅನ್ನಿಸುತ್ತಿತ್ತ ಅಂತ ಕೇಳಿದರೆ... ಆಗೆಲ್ಲಾ ಕೌಂಚಿ ಮಲಗಿ ಬಿಡುವುದಪ್ಪ. ಹಾಗೂ ಒಂದೆರಡು ಸಾರಿ ಜಾರಿ ಬೀಳ್ತೇನೆ ಅಂತಾದಾಗ ಆ ಕಲ್ಲುರ್ಟಿ ಅಪ್ಪೆಯೇ ಬಂದು ಕಾಪಾಡಿದ್ದಾಳೆ ಅಂತಿಟ್ಕೊಳ್ಳಿ." ಅಂತಕ್ಕ ಮಲಗಿದಲ್ಲಿಂದ ದಿಗ್ಗನೆ ಎದ್ದಿದ್ದರು. "ಹೌದೇ?... ಯಾವಾಗನೆ? ಯಾವ ರೂಪದಲ್ಲಿ ಬಂದದ್ದೇ ಕಲ್ಲುರ್ಟಿ ಅಪ್ಪೆ?" "ಯಾವ ರೂಪದಲ್ಲಿ ಅಂದರೆ?... ಹಾಂ... ನಮ್ಮ ಎಡ್ಡಿ ಸೋಜರ ಆಡಿನ ರೂಪದಲ್ಲಿ ಅಂತಿಟ್ಕೊಳ್ಳಿ" ಕತ್ತಲಲ್ಲಿ ಅಕ್ಕುವಿನ ಗಂಭೀರವಾದ ಮುಖ ಮಂಚದಲ್ಲಿ ಮಲಗಿದ್ದ ಅಂತಕ್ಕನಿಗೆ ಕಾಣುತ್ತಿರಲಿಲ್ಲ. "ಸಾಕು ಬಿಡೇ ನಿನ್ನ ಮಸ್ಕಿರಿ" ಅಂತಕ್ಕ ಮತ್ತೆ ಮಲಗಿದ್ದರು. ಎಡ್ಡಿ ಸೋಜರ ಆಡಿನ ರೂಪದಲ್ಲಿ ಕಲ್ಲುರ್ಟಿ ಅಪ್ಪೆ ಬರಲು ಕಾರಣವಾದ ಆ ಗಳಿಗೆಯ ನೆನಪು ಅಕ್ಕುವಿನ ನಿದ್ದೆಯನ್ನು ಕಸಿದಿತ್ತು.

ನೋಡುವವರ ಕಣ್ಣಿಗೆ ಕಿಸುರಾಗುತ್ತಿದ್ದ ಇಂತಹ ಸಂಬಂಧ ಹಳಸಿದ್ದು ಅಂತಕ್ಕ ತೀರಿ ಹೋಗುವ